# ಭಾರತದ ಕ್ರಿಮಿನಲ್ ಜಸ್ಟಿಸ್ ರಿಫಾರ್ಮ್ಸ್ ಕಾರ್ಯಾಗಾರ

ಸಂ.ಕ. ಸಮಾಚಾರ, ಮಂಗಳೂರು

ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ಸುರತ್ಕಲ್‌ನಲ್ಲಿ ಜು.1 ರಂದು ಭಾರತದಲ್ಲಿ ಹೊಸದಾಗಿ ಜಾರಿಗೆ ಬಂದಿರುವ ಅಪರಾಧ ನ್ಯಾಯ ಸುಧಾರಣೆಗಳ ಕುರಿತು ಜಾಗೃತಿ ಕಾರ್ಯಾಗಾರ ನಡೆಯಿತು.

ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯಲ್ಲಿನ ಗಮನಾರ್ಹ ಬದಲಾವಣೆಗಳ ಬಗ್ಗೆ ಎನ್‌ಐಟಿಕೆ ಸಮುದಾಯಕ್ಕೆ ಶಿಕ್ಷಣ ನೀಡುವ ಉದ್ದೇಶವನ್ನು ಹೊಂದಿದೆ.



ವಿದ್ಯಾರ್ಥಿ ಕಲ್ಯಾಣ ವಿಭಾಗದ ಡೀನ್, ಮಹಿಳಾ ಕಲ್ಯಾಣ ವಿಭಾಗದ ಪ್ರಭಾರ ಪ್ರಾಧ್ಯಾಪಕರು, ಅಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಹೆಸರಾಂತ ವಕೀಲ ಪೃಥ್ವಿರಾಜ್ ರೈ ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷಿ ಅಧಿನಿಯಮ್‌ಗಳ ಪ್ರಮುಖ ನಿಬಂಧನೆಗಳನ್ನು ತಿಳಿಸಿದರು.

Samyuktha Karnataka, Date: 02/07/24, p, 02